ಇಂದು ದಿನಾಂಕಃ 06.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 6 ಮತ್ತು 7 ರವರ ಪರ ಶ್ರೀ ಜಿ ವಿ ಕೆ ವಕೀಲರಿಂದಃ

ವಾದಿಯ ಕುಟುಂಬದ ಮೂಲ ಪುರುಷ ಗುಡ್ಡಪ್ಪ ಎಂದರೆ ಸರಿ. ಆತನಿಗೆ ಗಂಗಮ್ಮ ಎಂಬ ಹೆಂಡತಿ ಇರುತ್ತಾಳೆ ಎಂದರೆ ಸರಿ. ಅವರಿಗೆ ರುದ್ರಮ್ಮ ಎಂಬ ಹೆಣ್ಣು ಮಗಳನ್ನು ಹೊರತುಪಡಿಸಿ ಬೇರೆ ಮಕ್ಕಳು ಇರಲಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಸುಮಾರು 11 ವರ್ಷಗಳ ಹಿಂದೆ ರಿ ಸ.ನಂ. 72/2, 3 ಎಕರೆ 20 ಗುಂಟೆ ಜಮೀನನ್ನು ನನ್ನ ತಾಯಿ ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ಆಸ್ತಿಯನ್ನು ನಾವು ಗದಿಗೆಪ್ಪ ತಂದೆ ಚನ್ನಬಸಪ್ಪ ರವರಿಂದ ಖರೀದಿ ಮಾಡಿರುತ್ತೇವೆ. ದಾವಾ ಆಸ್ತಿ ರುದ್ರಮ್ಮ ರವರಿಗೆ ಸೇರಿದ್ದು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ರುದ್ರಮ್ಮನ ಗಂಡ ಚಿಕ್ಕಪ್ಪ ಖೊಟ್ಟಿಯಾಗಿ ತನ್ನ ಹೆಸರಿಗೆ ದಾಖಲು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚಿಕ್ಕಪ್ಪನಿಗೆ ಯಾವುದೇ ಆಸ್ತಿಯ ಮೇಲೆ ಹಕ್ಕು ಇಲ್ಲದಿದ್ದರೂ ಅವರು ಮಾರಾಟ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ.

2. ನಾನು ಖರೀದಿ ಮಾಡಿರುವಂತಹ ಆಸ್ತಿಯ ಸರ್ವೆನಂ. 73/2/ಅ ಆಗಿರುತ್ತದೆ. ನಾನು ಸದರಿ ಸರ್ವೆ ನಂಬರನಲ್ಲಿ 37 ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಗದಿಗೆಪ್ಪನಿಗೆ ಆಸ್ತಿ ಮಾರಾಟ ಮಾಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಗದಿಗೆಪ್ಪರವರಿಗೆ ಯಾವುದೇ ಮಾಲೀಕತ್ವದ ಹಕ್ಕು ಇಲ್ಲದಿದ್ದರೂ ಕೂಡ ನನಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರ ಹೆಸರಿಗೆ ಖರೀದಿ ಕಾಗದ ಪತ್ರ ಇತ್ತು ನಾವು ಅದನ್ನು ನೋಡಿ ಜಮೀನನ್ನು ಖರೀದಿ ಮಾಡಿರತ್ತೇವೆ ಎಂದು ನುಡಿದಿರುತ್ತಾರೆ. ರುದ್ರವ್ವ ರವರ ಗಂಡನಿಗೆ ಯಾವುದೇ ಪರಮಾಧಿಕಾರ ಇರಲಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಆ ಕಾರಣದಿಂದ ನಾನು ಮಾಡಿಕೊಂಡಿರುವ ಖರೀದಿ ಪತ್ರಕ್ಕೆ ಯಾವುದೇ ಕಿಮ್ಮತು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.